ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

**Phone No. : 08183 226071** **Email: dcfsagar123@gmail.com**

ಕ್ರ:ಬಿ1/ಭೂಮಿ/ಎ.ಫ್‌ಸಿ/ಒ.ಎಫ್.ಸಿ/142791/2022–23 ದಿ: 31–10–2022

ಗೆ,
ಜಿಯೋ ಡಿಜಿಟಲ್ ಫೈಬರ್ ಪ್ರೈವೇಟ್ ಲಿಮಿಟೆಡ್
No. 51 RMZ Icon, Palace Cross Road
Vasanthanagar, Bangalore 560052

**Proposal No. FP/KA/OFC/142791/2022**

ವಿಷಯ:– Diversion of 0.9823 Ha of Forest for laying Jio Digital Fibre underground OFC cable from Agumbe to Karimane in Sagar and Shimoga Division

ಉಲ್ಲೇಖ:–
1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/OFC/142791/2022
2. ನಿಮ್ಮ ಕಛೇರಿ ಪತ್ರ ಸಂಖ್ಯೆ: JDFPL/OFC/RoW/Forest/Shimoga/029 Dt. 14.07.2022.
3. ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಕಛೇರಿ ಪತ್ರ ಸಂಖ್ಯೆ: 497/2022–23 ದಿನಾಂಕ: 09.09.2022
4. ವಲಯ ಅರಣ್ಯಾಧಿಕಾರಿ, ಕಾರ್ಗಲ್ ವಲಯ, ಕಾರ್ಗಲ್ ಇವರ ಕಛೇರಿ ಪತ್ರ ಸಂಖ್ಯೆ: 479/2022–23 ದಿನಾಂಕ: 30.09.2022
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪವಿಭಾಗ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 635/2022–23 ದಿನಾಂಕ: 09.09.2022
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ಉಪವಿಭಾಗ, ಸಾಗರ ಇವರ ಕಛೇರಿ ಪತ್ರ ಸಂಖ್ಯೆ: 967/2022–23 ದಿನಾಂಕ: 11.10.2022

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಹೊಸನಗರ ಮತ್ತು ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ Diversion of 0.9823 Ha of Forest for laying Jio Digital Fibre underground OFC cable from Agumbe to Karimane in Sagar and Shimoga Division ಯೋಜನೆಗಾಗಿ ಸಾಗರ ವಿಭಾಗ ವ್ಯಾಪ್ತಿಗೆ ಒಳಪಡುವ 9 ಗ್ರಾಮಗಳಿಂದ ಒಟ್ಟು 0.9823 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹಾಗೂ ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ನೀವು ಉದ್ದೇಶಿಸಿದ್ದು, ನಿಮ್ಮ ಪ್ರಸ್ತಾವನೆಯಲ್ಲಿ ಸದರಿ ಯೋಜನೆಗೆ ಬಳಕೆಯಾಗಲಿರುವ ಗ್ರಾಮವಾರು ಅರಣ್ಯ ಪ್ರದೇಶಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ತಾಲ್ಲೂಕು | ಗ್ರಾಮ | ಸರ್ವೆ ನಂ. | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|
| 1 | ಹೊಸನಗರ | ಕವರಿ | 74, 70, 66, 69, 67, 58, 56, 65, 46, 114 & 3 | 0.226485 |
| 2 | | ಯಡೂರು | 10, 17, 6, 5, 148 & 162 | 0.07686 |
| 3 | | ಸುಳಗೋಡು | 75 | 0.160483 |
| 4 | | ಗಿಣಿಕಲ್ಲು | ರೋಡ್ | 0.040477 |
| 5 | | ನಿಡಗೋಡು | 65, 62, 43, 49 & 48 | 0.085494 |
| 6 | | ಖೈರಗುಂದ | 137, 133, 173, 106, 111, 112, 106 & 77 | 0.13801 |
| 7 | | ಅಂಡಗದ್ದೂರು | 169, 170, 158, 156, 154, 155, 149 & 22 | 0.06452 |
| 8 | ಸಾಗರ | ಕಾರ್ಗಲ್ | 14, 1 8 | 0.151 |
| 9 | | ಬಿಳಿಗಲ್ಲೂರು | 48, 65, 63, 61 & 1 | 0.0389 |
| | | | 9 ಗ್ರಾಮಗಳಿಂದ ಒಟ್ಟು ವಿಸ್ತೀರ್ಣ | **0.9823** |

ಸದರಿ ಈ ಯೋಜನೆಗೆ ಸಂಬಂಧಿಸಿದಂತೆ ನಿಮ್ಮ ಸಮೀಕ್ಷೆಯ ಪ್ರಕಾರ ಸಾಗರ ಅರಣ್ಯ ವಿಭಾಗದ ಹೊಸನಗರ ಮತ್ತು ನಗರ ವಲಯದ ವ್ಯಾಪ್ತಿಯಲ್ಲಿ ಬರುವ 9 ಗ್ರಾಮಗಳಿಂದ ಒಟ್ಟು 0.9823 ಹೆಕ್ಟೇರ್ ಅರಣ್ಯ ಪ್ರದೇಶವು ಬಳಕೆಯಾಗಲಿದೆ ಎಂದು ನಮೂದಿಸಿ ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದಲ್ಲಿ ಅರಣ್ಯ ಭೂಮಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ವಲಯ ಅರಣ್ಯಾಧಿಕಾರಿಗಳು, ನಗರ ಮತ್ತು ಕಾರ್ಗಲ್ ವಲಯ, ಇವರು ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ಥಳಗಳಗೆ ಭೇಟಿ ನೀಡಿ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕಾಶೆಯಂತೆ ಸ್ಥಳ ಪರಿಶೀಲಿಸಿ, ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ (3) & (4)ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ ಹಾಗೂ ಸದರಿ ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ (5) & (6) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಮತ್ತು ಸಾಗರ ಉಪ ವಿಭಾಗ ಇವರು ಅನುಮೋದಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ನಗರ ಮತ್ತು ಕಾರ್ಗಲ್ ವಲಯ ವ್ಯಾಪ್ತಿಯ 9 ಗ್ರಾಮಗಳ 47 ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 0.9823 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಲಿದೆ ಎಂದು ನಮೂದಿಸಲಾಗಿರುತ್ತದೆ. ಆದರೆ ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಸ್ಥಳ ಪರಿಶೀಲನಾ ವರದಿಯಲ್ಲಿ ನಗರ ಮತ್ತು ಕಾರ್ಗಲ್ ವಲಯ ವ್ಯಾಪ್ತಿಯ 11 ಗ್ರಾಮಗಳ 32 ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 0.7347 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಲಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಸದರಿ ಗ್ರಾಮವಾರು ಹಾಗೂ ಸರ್ವೆ ನಂಬರ್‌ವಾರು ಅರಣ್ಯ ಪ್ರದೇಶದ ಮಾಹಿತಿ ಈ ಕೆಳಕಂಡಂತಿರುತ್ತದೆ.

**ಜಿಯೋ ಒ.ಎಫ್.ಸಿ. ಕೇಬಲ್ ಯೋಜನೆಗೆ ಉಪಯೋಗವಾಗಲಿರುವ ಅರಣ್ಯ ಪ್ರದೇಶದ ವಿವರ**

| ಕ್ರ. ಸಂ. | ಗ್ರಾಮ | ಅರಣ್ಯ ಪ್ರದೇಶದ ವಿವರ | ಸರ್ವೆ ನಂ. | ಪ್ರಸ್ತಾಪಿತ ಉದ್ದ (ಮೀ) | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| 1 | ಕವರಿ | ಕವರಿ ಸೆಕ್ಷನ್-4 | 74 | 1050 | 0.03150 |
| | | | 66 | 1750 | 0.0525 |
| | | | 46 | 800 | 0.0240 |
| | | | 5 | 1050 | 0.0315 |

| | | | | | |
|---|---|---|---|---|---|
| | ಕವರಿ | ಕವರಿ ಸೆಕ್ಷನ್-4 ಮತ್ತು ಹಸ್ತಾಂತರಿತ ಅರಣ್ಯ | 56 | 500 | 0.0150 |
| | | | 65 | 700 | 0.0210 |
| | | | 30 | 150 | 0.0045 |
| | | | 2 | 1300 | 0.0390 |
| 2 | ಯಡೂರು | ಹಸ್ತಾಂತರಿತ ಅರಣ್ಯ | 17 | 450 | 0.0135 |
| 3 | ಸುಳಗೋಡು | ಸುಳಗೋಡು ಮೀಸಲು ಅರಣ್ಯ | 20 | 300 | 0.0090 |
| | | | 75 | 1050 | 0.0315 |
| | | ಮಾಣಿಬೈಲ್ ರಾಜ್ಯ ಅರಣ್ಯ | 74 | 1950 | 0.0585 |
| | | ಹಸ್ತಾಂತರಿತ ಅರಣ್ಯ | 73 | 800 | 0.0240 |
| 4 | ನಿಡಗೋಡು | ಹಸ್ತಾಂತರಿತ ಅರಣ್ಯ | 66 | 200 | 0.0060 |
| | | ನಿಡಗೋಡು ಸೆಕ್ಷನ್-4 | 65 | 800 | 0.0240 |
| | | | 62 | 350 | 0.0105 |
| | | | 43 | 700 | 0.0210 |
| | | | 48 | 150 | 0.0045 |
| 5 | ಗಿಣಿಕಲ್ | ಹಸ್ತಾಂತರಿತ ಅರಣ್ಯ | 47 | 560 | 0.0168 |
| | | | 50 | 180 | 0.0054 |
| 6 | ಖೈರಗುಂದ | ಹಸ್ತಾಂತರಿತ ಅರಣ್ಯ | 137 | 901 | 0.02703 |
| | | | 65 | 1208 | 0.03624 |
| | | ಸೂಚಿತ ಅರಣ್ಯ | 106 | 1326 | 0.03978 |
| | | ಖೈರಗುಂದ ಮೀಸಲು ಅರಣ್ಯ | 66 | 511 | 0.01533 |
| | | | 128 | 153 | 0.00459 |
| 7 | ಅಂಡಗದೋದೂರು | ಹಸ್ತಾಂತರಿತ ಅರಣ್ಯ | 169 | 412 | 0.01236 |
| 8 | ಕಬಳೆ | ಕಬಳೆ ಮೀಸಲು ಅರಣ್ಯ | 71 | 1581 | 0.04743 |
| | | | 72 | 175 | 0.00525 |
| 9 | ಕರಿಮನೆ | ಹಸ್ತಾಂತರಿತ ಅರಣ್ಯ | 106 | 1003 | 0.03009 |
| 10 | ಕಾರ್ಗಲ್ | ಕಾರ್ಗಲ್ ರಾಜ್ಯ ಅರಣ್ಯ | 1 | 783 | 0.0235 |
| | | ಜೋಗ ರಾಜ್ಯ ಅರಣ್ಯ ಬ್ಲಾಕ್-ಎ | 14 | 1145 | 0.0344 |
| 11 | ಬಿಳಿಗಲ್ಲೂರು | ಕಾರ್ಗಲ್ ರಾಜ್ಯ ಅರಣ್ಯ | 48 | 500 | 0.0150 |
| | | | ಒಟ್ಟು | 24488 ಮೀ | 0.7347 ಹೆ. |

ಸ್ಥಳ ಪರಿಶೀಲನಾ ವರದಿಯಂತೆ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ವಿಸ್ತೀರ್ಣಕ್ಕೂ, ಸ್ಥಳದಲ್ಲಿ ಗುರುತಿಸಿರುವ ಪ್ರದೇಶದ ನೈಜ ವಿಸ್ತೀರ್ಣಕ್ಕೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ ಎಂದು ವಲಯ ಅರಣ್ಯಾಧಿಕಾರಿ, ನಗರ ಮತ್ತು ಕಾರ್ಗಲ್ ವಲಯ ಇವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ನೀವು ವಲಯ ಅರಣ್ಯಾಧಿಕಾರಿ, ನಗರ ಮತ್ತು ಕಾರ್ಗಲ್ ವಲಯ ಇವರೊಂದಿಗೆ ಸಮನ್ವಯ ಸಾಧಿಸಿ ಪ್ರಸ್ತಾಪಿತ ಯೋಜನಾ ಪ್ರದೇಶದ ಮರು ಮೋಜಣಿ ನಡೆಸಿ ಪ್ರಸ್ತಾಪಿತ ಯೋಜನೆಯಲ್ಲಿ ನಿಖರವಾಗಿ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಪರಿಷ್ಕೃತ ಯೋಜನಾ ನಕಾಶೆಗಳನ್ನು

(ಟೋಪೊ ಮತ್ತು ಗ್ರಾಮ ನಕಾಶೆ) ತಯಾರಿಸಿ ಹಾಗೂ ಪರಿವೇಶ್ ತಂತ್ರಾಂಶದ ಪಾರ್ಟ್-1ರಲ್ಲಿ ಸೂಕ್ತ ತಿದ್ದುಪಡಿ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ಪರಿವೇಶ್ ತಂತ್ರಾಂಶದಲ್ಲಿ ಮರು ಸಲ್ಲಿಸಲು ಮತ್ತು ಪರಿಷ್ಕೃತ ಪ್ರಸ್ತಾವನೆಯ 08 ಸೆಟ್‌ಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ನಿಮ್ಮಲ್ಲಿ ಕೋರಲಾಗಿದೆ.

ನಿಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ